**ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ**

ಸಿಸಿ ನಂ. 91/2022.

| | | |
|---|---|---|
| ಸಾಕ್ಷಿಯ ಹೆಸರು | ಭಾಗ್ಯಲಕ್ಷ್ಮಿ | ಪಿ.ಡಬ್ಲ್ಯು-1 |
| ಗಂಡನ ಹೆಸರು | ನಾಗೇಶ್ | ಸಿ.ಡಬ್ಲ್ಯು-1 |
| ವಯಸ್ಸು | 48 ವರ್ಷ | |
| ಉದ್ಯೋಗ | ಖಾಸಗಿ ಕೆಲಸ | ದಿನಾಂಕಃ 04-04-2024 |
| ವಾಸ | ಹಳುವಳ್ಳಿ ಗ್ರಾಮ . | ಪ್ರಮಾಣ ವಚನ ಬೋಧಿಸಲಾಯಿತು. |

ಮುಖ್ಯ ವಿಚಾರಣೆಃ ಎಪಿಪಿ ರವರಿಂದ

ಮೃತ ನಾಗೇಶ ರವರು ನನ್ನ ಗಂಡ . ದಿಃ09-09-2021 ರಂದು ನಮ್ಮ ಯಜಮಾನರು ಪೂಜೆ ಸಾಮಾನು ತರಲು ಅವರ ಮೋಟಾರ್ ಸೈಕಲ್ ನಂಃ ಕೆಎ-13-ಇ.ಎಫ್-5449 ರಲ್ಲಿ ಆಲೂರಿಗೆ ಹೋಗಿದ್ದರು. ಚಾಸಾ-4 ರವರು ಸಂಜೆ 4-30 ರಲ್ಲಿ ನನಗೆ ಫೋನ್ ಮಾಡಿ ನಮ್ಮ ಯಜಮಾನರಿಗೆ ಅಪಘಾತವಾಗಿದೆ ಎಂದು ತಿಳಿಸಿದರು. ಆಗ ಚಾಸಾ-4 ರಿಂದ 6 ರವರು ಸೇರಿ ಯರೇಹಳ್ಳಿಯ ಚಂದ್ರಪ್ಪನವರ ಮನೆಯ ಮುಂದಿನ ರಸ್ತೆಗೆ ಬಂದು ನೋಡಲಾಗಿ ನಮ್ಮ ಯಜಮಾನರ ತಲೆಗೆ ಹಾಗೂ ದೇಹದ ಇತರ ಭಾಗಗಳಿಗೆ ಏಟಾಗಿ ತೀವ್ರ ಸ್ವರೂಪದ ರಕ್ತಗಾಯಗಳಾಗಿದ್ದು , ಸ್ಥಳದಲ್ಲಿಯೇ ಮೃತಪಟ್ಟಿದ್ದರು. ನಾನು ಚಾಸಾ-2 ರವರನ್ನು ವಿಚಾರಿಸಲಾಗಿ ನನ್ನ ಯಜಮಾನರು ಬೈಕ್ ನಲ್ಲಿ ಹೋಗುತ್ತಿರುವಾಗ ಎದುರುಗಡೆಯಿಂದ ಬಂದ ಬೈಕ್ ನಂ. ಕೆಎ-13-ಇ.ಆರ್-0067 ರ ಚಾಲಕ ಅತಿವೇಗ ಹಾಗೂ ಅಜಾಗರೂಕತೆಯಿಂದ ಬೈಕನ್ನು ಚಾಲನೆ ಮಾಡಿಕೊಂಡು ಬಂದು ಅಪಘಾತಪಡಿಸಿದ್ದಾಗಿ ತಿಳಿಸಿದರು. ನಂತರ ಮೃತ ದೇಹವನ್ನು ಆಲೂರಿನ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದೆವು. ಅಪಘಾತದಲ್ಲಿ ಚಾಸಾ-3 ರವರಿಗೆ ಮತ್ತು ಆರೋಪಿತನಿಗೂ ಗಾಯಗಳಾಗಿರುತ್ತವೆ. ನಂತರ ನಾನು ಆಲೂರು ಪೋಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು , ಸಾಕ್ಷಿಯು ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ದೂರು ಆಗಿದ್ದು , ದಾಖಲೆಯನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ದಿಃ10-09-2021 ರಂದು ಆಲೂರು ಪೋಲೀಸರಿಗೆ ಅಪಘಾತ ಸ್ಥಳವಾದ ಆಲೂರು - ಬಿಕ್ಕೋಡು ರಸ್ತೆಯ ಯರೇಹಳ್ಳಿ ಗ್ರಾಮದ ಚಂದ್ರಣ್ಣನವರ ಮನೆಯ ಮುಂಭಾಗದ ರಸ್ತೆಯನ್ನು ತೋರಿಸಿರುತ್ತೇನೆ. ಪೋಲೀಸರು ಮಧ್ಯಾಹ್ನ 12-00 ಗಂಟೆಗೆ ಮಹಜರ್ ಕ್ರಮ ಜರುಗಿಸಿದರು . ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು , ಸಾಕ್ಷಿಯು

ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಕೃತ್ಯಸ್ಥಳ ಮಹಜರ್ ಆಗಿದ್ದು , ದಾಖಲೆಯನ್ನು ನಿಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಚಾಸಾ-11 ಮತ್ತು 12 ರವರು ಸಹಾ ಇದ್ದರು. ಸಾಕ್ಷಿಗೆ 2 ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ತನ್ನನ್ನು ನೋಡಿ ಗುರುತಿಸಿದ ಮೇರೆಗೆ ಎರಡೂ ಪೋಟೋಗಳನ್ನು ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ಅನ್ನು ಅಪಘಾತವಾದ ಸ್ಥಳದ ಮಹಜರ್ ಕಾಲದಲ್ಲಿ ತೆಗೆದ ಪೋಟೋಗಳಾಗಿರುತ್ತವೆ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ

ಆರೋಪಿ ಪರ ವಕೀಲರು ಗೈರುಹಾಜರಾಗಿದ್ದು , ಆರೋಪಿಯು ನಮ್ಮ ವಕೀಲರು ಮಧ್ಯಾಹ್ನ 3-00 ಗಂಟೆಗೆ ಹಾಜರಾಗುತ್ತಾರೆ ಎಂದು ತಿಳಿಸಿದ ಮೇರೆಗೆ ಮಧ್ಯಾಹ್ನ 3-00 ಗಂಟೆಗೆ ಮುಂದೂಡಲಾಯಿತು.

ಮರುವಿಚಾರಣೆಃ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.

ಸಮಯ ಮಧ್ಯಾಹ್ನ 3-00 ಗಂಟೆಗೆ ಸಾಕ್ಷಿಯನ್ನು ಕರೆಯಲಾಗಿದ್ದು , ಆರೋಪಿ ಮತ್ತು ಸಾಕ್ಷಿದಾರರು ನ್ಯಾಯಾಲಯಕ್ಕೆ ಹಾಜರಾಗಿದ್ದು , ಆರೋಪಿ ಪರ ವಕೀಲರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ಪಾಟೀಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಆಲೂರು.